International Journal of Kannada Research
www.kannadajournal.com

ISSN: 2454–5813
IJKR 2019; 5(2): 180-184
© 2019 IJKR
www.kannadajournal.com
Received: 27-02-2019
Accepted: 29-03-2019

**ಯಶು ಕುಮಾರ್ ಡಿ.**
ಹೆಚ್.ಡಿ. ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ

**Correspondence**
**ಯಶು ಕುಮಾರ್ ಡಿ.**
ಹೆಚ್.ಡಿ. ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ

# ತುಳುನಾಡಿನ ಅವಳಿ ವೀರರು: ಕಾನದ ಕಟದ ಜಾನಪದೀಯ ಅಧ್ಯಯನ

**ಯಶು ಕುಮಾರ್ ಡಿ.**

ಕರ್ನಾಟಕದ ಪಶ್ಚಿಮ ಕರಾವಳಿಯ ಭಾಗವಾಗಿರುವ 'ತುಳುನಾಡು' ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಪ್ರದೇಶ. ಹಲವು ಭಿನ್ನ ಜನ ಸಮುದಾಯಗಳು, ಆಚರಣೆ, ಕಲೆ, ಸಂಪ್ರದಾಯ, ಆರಾಧನೆ ಮುಂತಾದವುಗಳಲ್ಲಿ ಇವತ್ತಿಗೂ ಕುತೂಹಲವನ್ನು, ಗೌಪ್ಯತೆಯನ್ನು ಕಾಯ್ದುಕೊಂಡು ಬಂದಿದೆ. ಜನಸಮುದಾಯಗಳು ತಾವಿರುವ ನಿರ್ದಿಷ್ಟ ಪ್ರಾದೇಶಿಕತೆಯಲ್ಲಿ ತನ್ನ ಅನನ್ಯತೆಯನ್ನು ಅಭಿವ್ಯಕ್ತಿಸುವಾಗ ಹಲವಾರು ಸಂವಹನ ಮಾಧ್ಯಮಗಳನ್ನು ಕಂಡುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ತುಳುನಾಡಿನಲ್ಲಿ 'ಭೂತಾರಾಧನೆ' ಅಥವಾ 'ದೈವಾರಾಧನೆ'ಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

ದೈವಾರಾಧನೆಗಿಂತ ಭಿನ್ನವಾಗಿ ಅವಳಿವೀರರು ಆರಾಧನೆಗೆ ಒಳಗಾಗುತ್ತಾರೆ. ಅವಳಿವೀರರನ್ನೂ ದೈವಗಳೆಂದೇ ಪರಿಭಾವಿಸಿ ತುಳುನಾಡಿನ ಹಲವು ಜನಸಮುದಾಯಗಳು ಆರಾಧಿಸುತ್ತವೆ. ತಮ್ಮ ಸಮುದಾಯಗಳ ಮೂಲ ಪುರುಷರೆಂದೂ, ಕುಲದೇವತೆಗಳೆಂದೂ ಅವಳಿವೀರರನ್ನು ತುಳುವ ಸಮುದಾಯಗಳು ಕಲ್ಪಿಸಿಕೊಂಡಿವೆ. ಹಾಗಾಗಿ ಅವಳಿವೀರರು ಸಾಂಸ್ಕೃತಿಕ ವೀರರಾಗಿಯೂ ಇಲ್ಲಿ ಕಂಡುಬರುತ್ತಾರೆ. ಹುಟ್ಟನಿಂದ ಜೊತೆಯಾಗಿದ್ದುಕೊಂಡು ಅಥವಾ ತಾಯಿಯ ಬಸಿರಿನಿಂದ ಏಕಕಾಲದಲ್ಲಿ ಜನಿಸಿ, ಜೊತೆಗೇ ಬೆಳೆದು, ಪರಾಕ್ರಮಿಗಳಾಗಿ, ಕೊನೆಗೆ ಅಕಾಲ ಮರಣಕ್ಕೆ ತುತ್ತಾಗಿ, ಆ ಬಳಿಕ ನಿರ್ದಿಷ್ಟ ತುಳುವ ಸಮುದಾಯವೊಂದರಿಂದ ಆರಾಧನೆಗೆ ಒಳಗಾದವರು ಅವಳಿವೀರರು.

ಜೀವಿತದಲ್ಲಿ ಅತಿಮಾನುಷ ಕಾರ್ಯಗಳನ್ನು ಮಾಡಿದ್ದ ವ್ಯಕ್ತಿಗಳ ಬಗ್ಗೆ, ಅವರು ಅಕಾಲ ಮರಣವನ್ನು ಪಡೆದಾಗ ವಿಶೇಷವಾದ ನಂಬುಗೆಗಳು ಸೇರಿ ಅವರನ್ನು ವೀರರಾಗಿ, ದೈವವಾಗಿಸುವ ಘಟನೆಗಳು ನಡೆಯುತ್ತವೆ. ಜನಪದರ ನಡುವಿನ ವ್ಯಕ್ತಿ–ಅವನ ಸಾಹಸ–ಅಕಾಲ ಮರಣ–ನಂಬಿಕೆ ಇವುಗಳು ಮುಖಾಮುಖಿಯಾಗಿ ವ್ಯಕ್ತಿಯನ್ನು ದೈವತ್ವಕ್ಕೇರಿಸುವ ಸಂದರ್ಭವನ್ನು ನಿರ್ಮಾಣ ಮಾಡುತ್ತವೆ. ಅವಳಿವೀರರನ್ನು ಇದೇ ಹಿನ್ನೆಲೆಯಲ್ಲಿ ವೀರರನ್ನಾಗಿ, ದೈವವನ್ನಾಗಿ ಕಲ್ಪಿಸಿಕೊಳ್ಳಲಾಗಿದೆ. "ಐತಿಹಾಸಿಕ ವ್ಯಕ್ತಿಗಳು ಸತ್ತ ನಂತರ ಅವರ ವ್ಯಕ್ತಿತ್ವಕ್ಕೆ ಅತಿಮಾನುಷತೆ ಸೇರಿ ಅವರು ಭೂತವೋ ಸಾಂಸ್ಕೃತಿಕ ವೀರನೋ (ಅಣಟಣಣಡಿಚಿಟ ಊಜಡಿಾ) ಆಗುವ ಕಾರಣ, ವಸ್ತುವಿನ ದೃಷ್ಟಿಯಿಂದ ಇವುಗಳು ಜನಪದ ಪುರಾಣದ (ಒಥಿಣು) ಸ್ವರೂಪದವು ಎನ್ನಬಹುದು" (ವಿವೇಕ ರೈ ಬಿ.ಎ. (ಡಾ); ೨೦೦೪, ಪುಟ ೭೫). ಅವಳಿವೀರರು ಸಾಂಸ್ಕೃತಿಕ ನಾಯಕರು ಎಂದು ಸಮುದಾಯಗಳು ಪರಿಭಾವಿಸುವ ಕಾರಣ ಹಾಗೂ ಐತಿಹಾಸಿಕ ವ್ಯಕ್ತಿಗಳಾಗಿ ಅವರು ಬದುಕಿದ್ದ ಕಾರಣಕ್ಕಾಗಿ ಅವರ ಬಗೆಗೆ ಇರುವ ಪಾಡ್ದನಗಳು, ಐತಿಹ್ಯ, ಕತೆಗಳು ಜನಪದ ಪುರಾಣ ವ್ಯಕ್ತಿಗಳನ್ನಾಗಿ ಪರಿಕಲ್ಪಿಸಿದೆ. ಸಹಜವಾಗಿ ಜನಪದರು ಇಂತಹ ಅವಳಿವೀರರ ವ್ಯಕ್ತಿತ್ವಕ್ಕೆ ಅತಿಮಾನುಷವಾದ ಅಂಶಗಳನ್ನು ಸೇರಿಸಿ, ಅವರನ್ನು ವೀರರನ್ನಾಗಿ ಪರಿಭಾವಿಸಿಕೊಂಡಿದ್ದಾರೆ.

ಚಲನಶೀಲವಾದ ಕಾಲದೊಂದಿಗೆ ಪೂರ್ವಿಕರ ಜ್ಞಾನವು ಜಾನಪದದ ಹಲವು ಪ್ರಕಾರಗಳ ಮೂಲಕ ಉಳಿದು, ಬೆಳೆದು ಬರುತ್ತದೆ. ಹೀಗೆ ನಿಷ್ಪನ್ನವಾದ ಕಲಾ ಮಾಧ್ಯಮವು ರಂಜನೆ, ಆರಾಧನೆಗಳ ತಳಹದಿಯಲ್ಲಿ ಹಲವು ರೂಪಗಳನ್ನು ತಾಳುತ್ತದೆ. "ಪ್ರತಿಯೊಂದು ಜನ ಸಮುದಾಯವು ತಾನು ಬದುಕುತ್ತಿರುವ ಜಗತ್ತಿನ ಬಗ್ಗೆ, ಈ ಜಗತ್ತಿನಾಚೆ ಇರುವ ಜಗತ್ತುಗಳ ಬಗ್ಗೆ, ಈ ಒಟ್ಟು ಜಗತ್ತುಗಳಲ್ಲಿ ಮಾನವನ ಸ್ಥಾನದ ಬಗ್ಗೆ ತನ್ನದೇ ಆದ ಪರಿಕಲ್ಪನೆಗಳನ್ನು ಹೊಂದಿದೆ" (ಸಂಧ್ಯಾರೆಡ್ಡಿ ಕೆ.ಆರ್.; ೨೦೦೪; ಪುಟ ೨೩೦) ಇಂತಹ ಜನಪದ ಮನಸ್ಸುಗಳು ಅವಳಿತನ, ಅವಳಿ ಹುಟ್ಟುಗಳ ಬಗ್ಗೆ ವಿಶೇಷವಾದ ಕಲ್ಪನೆಯೊಂದನ್ನು ಬೆಳೆಸಿಕೊಂಡಿತ್ತು.

ತುಳುನಾಡಿನಲ್ಲಿ ನಾಲ್ಕು ಅವಳಿ ವೀರರು ಕಂಡುಬರುತ್ತಾರೆ. ಬಿಲ್ಲವರಿಂದ ಆರಾಧನೆಯಾಗುವ ಬೈದೆರ್ಲು (ಕೋಟಿ ಚೆನ್ನಯ) ಮತ್ತು ಮುಲ್ಕಿ ಸೀಮೆಗೆ ಸೀಮಿತವಾಗಿ ಬಾರೆಯರು (ಕಾಂತಬಾರೆ ಬೂದಬಾರೆ), ಮುಗೇರ ಸಮುದಾಯದ ಮುಗೇರ್ಲು (ಮುದ್ದ ಕಳಲ) ಹಾಗೂ ಮನ್ಸ/ಆದಿದ್ರಾವಿಡರಿಂದ ಆರಾಧನೆಯಾಗುವ ಕಂಬೆರ್ಲು (ಕಾನದ ಕಟದ). ಈ ಎಲ್ಲಾ ಅವಳಿ ವೀರರು ತುಳುನಾಡಿನ ಶೂದ್ರ ವರ್ಗಕ್ಕೆ ಸೇರಿದವರಾಗಿದ್ದು, ಆಯಾ ಸಮುದಾಯಗಳ ವೀರರಾಗಿ, ನಾಯಕರಾಗಿ, ಮೂಲ ಪುರುಷರೆಂದೂ ಆರಾಧನೆಯಾಗುತ್ತಾರೆ.

ಪ್ರಸ್ತುತ ಇಲ್ಲಿ ಕಾನದ ಕಟದ ಅವಳಿ ವೀರರ ಬಗೆಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ.

**ಕಾನದ ಕಟದ ಅವಳಿ ವೀರರ ಪಾಡ್ದನ ಆಧಾರಿತ ಕಥಾ ಸಾರಾಂಶ:**

'ತೀರ್ತಮಂಜ ಪೆರಿಯಕೊಪ್ಪ' ಎನ್ನುವ ಊರಿನಲ್ಲಿ ಹತ್ತಾರು ಮನ್ಸ/ಆದಿದ್ರಾವಿಡರ ಕುಟುಂಬಗಳು ವಾಸಿಸುತ್ತಿದ್ದವು. ಅಲ್ಲಿ ಪೂಂಬಲಜ್ಜಿಗ ಮತ್ತು ಪಾಂಬಲ ಕರಿಯ ಎನ್ನುವ ಅಣ್ಣ ತಮ್ಮಂದರಿಗೆ ತಂಗಿಯೊಬ್ಬಳು ಹುಟ್ಟುತ್ತಾಳೆ. ಅದೇ ಕಾಲಕ್ಕೆ ಇಡೀ ಊರಿಗೆ ಮಾರಿ ರೋಗ ಬಂದು ಎಳೆಯ ಮಕ್ಕಳ ತಂದೆ ತಾಯಿ, ಜಾತಿ ಮಂದಿಯೆಲ್ಲಾ ಸತ್ತು ಈ ಮೂವರು ಉಳಿಯುತ್ತಾರೆ. ಆ ಊರನ್ನು ಬಿಟ್ಟು, ಮಿಜಾರು ಸಮೀಪದ ಕಿಜನೊಟ್ಟು ಬರ್ಕೆಗೆ ಹಸುಗೂಸಿನೊಂದಿಗೆ ಅಣ್ಣ ತಮ್ಮಂದಿರು ಬಂದರು. ಅಲ್ಲಿ ದೇಯಿ ಬೈದ್ಯೆತಿ ಈ ಮಕ್ಕಳ ಕತೆ ಕೇಳಿ, ಆ ಹೆಣ್ಣು ಮಗುವನ್ನು ತಾನೇ ಸಾಕಿದರು. ಎಳೆಯ ಮಕ್ಕಳಿಗೆ ಮನೆಯ ಸುತ್ತ ಮುತ್ತ, ದನದ ಕೊಟ್ಟಿಗೆಯ ಕೆಲಸ ಮಾಡಿಕೊಂಡಿರಲು ಹೇಳಿದರು.

ಆ ಹೆಣ್ಣು ಮಗುವಿಗೆ 'ಬೊಲ್ಲೆ' ಎಂದು ಹೆಸರಿಟ್ಟು ದೇಯಿ ಬೈದ್ಯೆತಿ ತಾನೇ ಸಾಕಿದರು. ಬೆಳೆದ ಬೊಲ್ಲೆ ಒಂದು ದಿನ ದೇಯಿಯ ಕಣ್ಣು ತಪ್ಪಿಸಿ ಅಲೇರ ಲಚ್ಚಿಲ್‌ಗೆ ಹುಲ್ಲು ತರಲು ಹೋದಳು. ಅಲ್ಲಿಗೆ ಕೋಣ ವ್ಯಾಪಾರಕ್ಕೆ ಬಂದಿದ್ದ ಎರು ಕನಡ ಬೊಲ್ಲೆಗೆ ಮದ್ದು ಹಾಕಿ ಅಪಹರಿಸಿದ. ಅವಳನ್ನು ಕರೆದುಕೊಂಡು ಬಂಗಾಡಿ ಸೀಮೆಗೆ ಬಂದಾಗ ಕತ್ತಲಾಯಿತು. ಅಲ್ಲಿಯೇ ಆ ರಾತ್ರಿ ಕಳೆಯಲು ನಿರ್ಧರಿಸಿದ ಕನಡ, ಬೊಲ್ಲೆಯನ್ನು ಬಂಗಾಡಿ ಗುತ್ತುಗೆ ಬೆಂಕಿ ತರಲು ಕಳುಹಿಸಿದ. ಬೊಲ್ಲೆಯ ವೃತ್ತಾಂತ ತಿಳಿದ ಬಂಗಾಡಿ ಅರಸರು ಎರು ಕನಡನನ್ನು ಘಟ್ಟದ ಮೇಲೆ ಓಡಿಸಿ, ಬೊಲ್ಲೆಯನ್ನು ತನ್ನ ಮನೆಯ ಆಳು ಅಂದ್ರನಿಗೆ ಕೊಟ್ಟು ತಾನೇ ಮದುವೆ ಮಾಡಿದರು.

ಮದುವೆಯಾದ ಬೊಲ್ಲೆ ಮೈನೆರೆದಳು. ಆ ಬಳಿಕ ಗರ್ಭವತಿಯಾದಳು. ಒಂದು ದಿನ ಬೊಲ್ಲೆ ಬಂಗಾಡಿ ಅರಮನೆಗೆ ಬಂದಿದ್ದಾಗ ಅಲ್ಲಿಯೇ ಅರಮನೆಯ ಸಮೀಪ ಇಬ್ಬರು ಅವಳಿ ಮಕ್ಕಳನ್ನು ಹಡೆದಳು. ಬಂಗಾಡಿ ಅರಸರೇ ಬಂದು ಮಕ್ಕಳಿಗೆ ಕಾನದ–ಕಟದ ಎಂದು ಹೆಸರಿಟ್ಟರು. ಬೊಲ್ಲೆ ಕೆಲವೇ ದಿನಗಳಲ್ಲಿ ತೀರಿಕೊಂಡಳು. ಅನಾಥರಾದ ಮಕ್ಕಳನ್ನು ಬಂಗಾಡಿ ಅರಸರು ತನ್ನ ಮನೆಯಲ್ಲಿಯೇ ಸಾಕಿದರು.

ಆಟವಾಡುವ ವಯಸ್ಸಿನ ಮಕ್ಕಳು ತೆಂಗಿನ ಮಡಲಿನ ದಂಟಿನಿಂದ ನೊಗ ನೇಗಿಲು ಮಾಡಿ ಅಂಗಳದ ಬದಿಯಲ್ಲಿ ಗದ್ದೆ ಮಾಡಿದರು. ಬಿತ್ತಲು ಭತ್ತ ಕೇಳಿದಾಗ ಮಕ್ಕಳ ಸತ್ಯ ಪರೀಕ್ಷಿಸಲೆಂದು ಬೇಯಿಸಿದ ಭತ್ತವನ್ನು ನೀಡಿದರು. ಅ ಭತ್ತವನ್ನೇ ಬಿತ್ತಿ ಮರುದಿನ ನೋಡಿದಾಗ ಮೊಳಕೆ ಬರಿಸಿದ್ದರು.

ಬೆಳೆದ ಕಾನದ ಕಟದರು ಬಂಗಾಡಿ ಸೀಮೆಯ ಗದ್ದೆ ಹಡಿಲು ಬಿದ್ದಿದ್ದನ್ನು ನೋಡಿ ತಾವು ಸಾಗುವಾಳಿ ಮಾಡುತ್ತೇವೆ ಎಂದರು. ಬಿತ್ತುವುದಕ್ಕೆ ಭತ್ತ ತರಲು ಘಟ್ಟಕ್ಕೆ ಹೋಗಿ ಅತಿಕಾರೆ ತಳಿಯನ್ನು ತರುವುದರ ಜೊತೆಗೆ, ಸುಬ್ರಹ್ಮಣ್ಯದಿಂದ ಕಾರಿ–ಕಬಿಲ ಕೋಣಗಳ ಜೊತೆಯನ್ನೂ ತಂದರು. ಒಂದೇ ರಾತ್ರಿಯಲ್ಲಿ ಕೆರೆ ತೋಡಿ, ಗದ್ದೆ ಉತ್ತು, ಅತಿಕಾರೆ ಬೀಜ ಬಿತ್ತಿ, ಬೆಳೆ ತೆಗೆದರು. ಒಂದು ದಿನ ಬೇಟೆಗೆ ಹೋಗಲು ಊರಿನವರು ಸಿದ್ಧತೆ ನಡೆಸಿದರು. ಬೇಟೆಗೆ ಹೋಗುವ ಗುಂಪಿನಲ್ಲಿ ಬೈದೆರ್ಲು ಮತ್ತು ಮುಗೇರ್ಲು ಕೂಡಾ ಇದ್ದರು. ಇಡೀ ದಿನದಲ್ಲಿ ಒಂದೇ ಒಂದು ಬೇಟೆಯಾಗಲಿಲ್ಲ. ಬಾಯಾರಿದ ಮೂವರು ಅವಳಿಗಳೂ ಕಾರ್ಕಳದ ಪಾಜಗುಡ್ಡೆಯ ನೆತ್ತಿಯಲ್ಲಿ ಕಲ್ಲು ಒಡೆದು ನೀರು ತೆಗೆಯುವ ಮೂಲಕ ಶಕ್ತಿ ಪ್ರದರ್ಶನಕ್ಕೂ ಮುಂದಾದರು. ಬೈದೆರ್ಲು ತಮ್ಮ ಸುರಿಯ ಪ್ರಯೋಗಿಸಿದಾಗ ಅದರ ಮೊನೆ ಮೊಂಡಾಯಿತು. ಮುಗೇರ್ಲು ಬಾಣ ಬಿಟ್ಟಾಗ ಅದೂ ಮೊಂಡಾಯಿತು. ಆಗ ಕಂಬೆರ್ಲು ತಮ್ಮ ಕೈಯಲ್ಲಿದ್ದ ಗೋಲಂಬುರು ಗಿಡದ ದಂಟೆಯನ್ನು ಹಾಕಿ ನೀರು ತೆಗೆದರು. ಆ ನೀರನ್ನು ಬೈದೆರ್ಲು ಕುಡಿದರು. ಮುಗೇರ್ಲು ನೀರು ಕುಡಿದು ಅದನ್ನು ಕದಡಿದರು. ಮುಗೇರ್ಲನ್ನು ಓಡಿಸಿ, ಕಂಬೆರ್ಲು ಕೂಡಾ ಬಾಯಾರಿಕೆ ನೀಗಿಸಿಕೊಂಡರು.

ಬೇಟೆ ಮುಂದುವರೆಸಿದಾಗ ಹಂದಿಯೊಂದು ಮುಗೇರ್ಲುಗೆ ಕಾಣಿಸಿತು. ಬೆನ್ನಟ್ಟಿ ಹೋದ ಚೆನ್ನಯ ಅದನ್ನು ಕೊಂದು ಹಾಕಿದ. ಆಗ ಮುಗೇರ್ಲು ತಾವು ನೋಡಿದ ಹಂದಿಯನ್ನು ನೀವು ಹೊಡೆದಿರಿ ಎಂದಾಗ, ಕೋಟಿ ಹಂದಿಯನ್ನು ಮತ್ತೆ ಜೀವ ಬರಿಸಿದ. ಆ ಹಂದಿಯನ್ನು ಮುಗೇರ್ಲು ಹೊಡೆದರು. ಮಾಂಸ ಪಾಲು ಮಾಡುವಾಗ ತಮಗೆ ಎಲುಬನ್ನೇ ಕೊಟ್ಟದ್ದಕ್ಕಾಗಿ ಕಂಬೆರ್ಲು ಮಾಂಸವನ್ನು ನಾಯಿಗೆ ಎಸೆದು ಹಿಂತಿರುಗಿ ಬಂದರು.

ಯೌವನಕ್ಕೆ ಬಂದ ಕಾನದ ಕಟದರು ತಮ್ಮ ಮಾವಂದಿರನ್ನು ನೋಡುವ ಬಯಕೆಯಿಂದ ಕಿಜನೊಟ್ಟುಗೆ ಬಂದರು. ಅಲ್ಲಿಯೇ ಇದ್ದ ಕಂಬೆರ್ಲುಗೆ ಮೀನು ಹಿಡಿಯುವ ಮನಸ್ಸಾಯಿತು. ಮೀನು ಬೇಟೆಗೆ ಹೋಗುವಾಗ ಮಾವಂದಿರಾದ ಪಾಂಬಲಜ್ಜಿಗ ಮತ್ತು ಪೂಂಬಲಕರಿಯದರು ಸಿರಿಗಳ ಗುಂಡಿ, ಬೆರ್ಮೆರ ಗುಂಡಿ ಮತ್ತು ಅಲೇರ ಗುಂಡಿಗಳಿಗೆ ಕಡು(ವಿಷ) ಹಾಕಬಾರದೆಂದು ಎಚ್ಚರಿಸಿದರು. ಆದರೂ ಕಂಬೆರ್ಲು ಅಲೇರ ಗುಂಡಿಗೆ ಕಡು ಹಾಕಿದರು. ಒಂದೇ ಒಂದು ಮೀನು ಅವರಿಗೆ ಸಿಗಲಿಲ್ಲ. ನಿರಾಸರಾದ ಕಂಬೆರ್ಲು ಹಿಂತಿರುಗಿ ಮನೆಗೆ ಬರುವ ದಾರಿಯಲ್ಲಿ ಕಟದನು ತನ್ನ ಮುಟ್ಟಾಲೆಯನ್ನು ಅಲೇರ ಗುಂಡಿಯ ಬಳಿ ಮರೆತು ಬಂದಿದ್ದಾಗಿ ಹೇಳಿ, ಹಿಂದಕ್ಕೆ ಹೋದನು. ಅಲೇರ ಗುಂಡಿಯ ಬಳಿ ಬಂದಾಗ ಆನೆ ಗಾತ್ರದ ಮೀನೊಂದು ಕಾಣಿಸಿತು. ಹಿಡಿಯಲು ಹೋದ ಕಟದನನ್ನು ಗುಂಡಿಯಲ್ಲಿದ್ದ ಅಲೇರ ಪಂಜುರ್ಲಿ ಮಾಯ ಮಾಡಿದ. ಎಷ್ಟು ಹೊತ್ತಾದರೂ ಹಿಂತಿರುಗದ ತಮ್ಮ ಕಟದನನ್ನು ಹುಡುಕಿ ಕಾನದನು ಅಲೇರ ಗುಂಡಿಯ ಬಳಿ ಬಂದಾಗ, ಕಟದನ ಮುಟ್ಟಾಲೆ ನೀರಿನಲ್ಲಿ ತೇಲುತ್ತಿತ್ತು. ಅದೇ ಆನೆ ಗಾತ್ರದ ಮೀನು ಕಾನದನಿಗೂ ಕಾಣಿಸಿಕೊಂಡಿತು. ಕಟದನೂ ಅಲೇರ ಗುಂಡಿಗೆ ಇಳಿದಾಗ ಅವನನ್ನೂ ಅಲೇರ ಪಂಜುರ್ಲಿ ಮಾಯ ಮಾಡಿದ.

ಸಂಜೆಯವರೆಗೂ ಮಕ್ಕಳು ಹಿಂತಿರುಗದ್ದನ್ನು ನೋಡಿ ಮಾವಂದಿರು ಹುಡುಕಾಡಿದರು. ಅಲೇರ ಗುಂಡಿಯಲ್ಲಿ ಎರಡು ಮುಟ್ಟಾಲೆಗಳು ತೇಲುತ್ತಿತ್ತು. ದೇಯಿ ಬೈದ್ಯೆತಿಗೆ ವಿಷಯ ಮುಟ್ಟಿಸಿದರು. ದೇಯಿ ಬಂದು ತನ್ನ ಮುದ್ರೆಯ ಉಂಗುರವನ್ನು ಅಲೇರ ಗುಂಡಿಗೆ ಇಳಿಸಿದಾಗ ಅವಳಿ ಮಕ್ಕಳ ಶವ ಮೇಲೆ ಬಂತು. ಕಿಜನೊಟ್ಟು ಬರ್ಕೆಯ ಗದ್ದೆಯಲ್ಲಿ ಜೋಡು ಕಾಷ್ಠ ಮಾಡಿ ಹೆಣ ಸುಟ್ಟರು. ಕಾಷ್ಠ ಅರ್ಧ ಸುಟ್ಟಾಗ ಕಂಬೆರ್ಲುಗಳು ಎದ್ದು ನಿಂತರು. ತಾವಿನ್ನು ಕಾಯ ಬಿಟ್ಟು ಮಾಯ ಸೇರುತ್ತೇವೆಂದೂ, ಮಾಯವಾದ ಬಳಿಕ ಸಮುದಾಯವನ್ನು ಕಾಪಾಡಿಕೊಂಡು ಬರುತ್ತೇವೆಂದು ಹೇಳಿ ಮಾಯವಾದರು.

ಅವಳಿ ವೀರರನ್ನು ಆರಾಧಿಸುವ ಸಮುದಾಯಗಳಲ್ಲಿ ಅತ್ಯಂತ ಕೆಳಸ್ತರದಲ್ಲಿರುವುದು ಮನ್ಸ/ಆದಿದ್ರಾವಿಡ ಸಮುದಾಯ. ಕೃಷಿ ಕಾರ್ಮಿಕರಾಗಿ, ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಹಲವಾರು ಆಚರಣೆಗಳಲ್ಲಿ 'ಮೂಲದವರಾಗಿ' ಮಣ್ಣು ಮತ್ತು ಫಲವಂತಿಕೆಗಳ ರೂಪಕಗಳಾಗಿ ಈ ಸಮುದಾಯ ಜೀವಿಸಿದೆ. ಆಡಳಿತಾತ್ಮಕ, ರಾಜಕೀಯ ಪ್ರೇರಿತವಾಗಿರುವುದು ಮಾತ್ರ ಯುದ್ಧವೆನಿಸದೆ ಈ ಭೂಮಿಯಲ್ಲಿ ಕೃಷಿ ಮಾಡುವ, ಅದನ್ನು ಪೋಷಿಸುವ ಕಾರ್ಯವನ್ನೇ ಬದುಕಿನುದ್ದಕ್ಕೂ ಯುದ್ಧವೆಂದು ಪರಿಭಾವಿಸಿದ ಸಮುದಾಯವಿದು. ಹೀಗಾಗಿಯೇ ಮನ್ಸ/ಆದಿದ್ರಾವಿಡರ ಅವಳಿವೀರರಾದ ಕಾನದ ಕಟದರ ಕಥಾನಕದಲ್ಲಿ ಇಡಿಯಾಗಿ ಗೋಚರವಾಗುವುದು ಕೃಷಿ, ಅದರ ಪೋಷಣೆ, ಅನ್ವೇಷಣೆ, ಪ್ರಯೋಗಗಳು ಮತ್ತು ಕೃಷಿಗೆ ಸಂಬಂಧಿತ ಮೀನು, ಕಾಡುಬೇಟೆಗಳು. ಕೇವಲ ಇಷ್ಟಕ್ಕೆ ಮಾತ್ರವೇ ಒಂದು ಸಮುದಾಯ ಅವಳಿಗಳನ್ನು ವೀರರಾಗಿ ಪರಿಭಾವಿಸುತ್ತದೆ ಎಂದುಕೊಂಡರೆ, ಕೃಷಿಯ, ಅದರ ಸುತ್ತಲಿನ ಕಾರ್ಯಗಳು, ಸಾಧನೆಗಳು ಕಡಿಮೆಯಲ್ಲ ಎಂದೇ ಭಾವಿಸಬೇಕು. ಹೀಗಿದ್ದ ಸಮುದಾಯವೊಂದು ನಿರಂತರವಾಗಿ ತನಗಿಂತ ಮೇಲಿನ ಸಮುದಾಯಗಳಿಂದ ಶೋಷಣೆ, ಅವಮಾನಗಳಿಗೆ ಈಡಾಗುತ್ತಾ ಬಂದಿದೆ. ಆದರೆ ಅದರ ಆಂತರ್ಯದಲ್ಲಿ ಈ ಮಣ್ಣಿನ ಮೂಲದ ಮನ್ಸ/ಆದಿದ್ರಾವಿಡ ಸಮುದಾಯವು ಇಡೀ ಸಮಾಜಕ್ಕೂ ಅನಿವಾರ್ಯವಾಗಿತ್ತು ಎನ್ನುವ ನಿಜ ಸಂಗತಿಗಳು ಗಾಢವಾಗಿ ಗೋಚರಿಸುತ್ತವೆ. ಕೃಷಿ ಕಾರ್ಮಿಕರಾಗಿದ್ದ ಸಮುದಾಯವು ಕೃಷಿಯ ಪ್ರತಿ ಹಂತದಲ್ಲೂ ಸಾಂದರ್ಭಿಕವಾಗಿ ಪಡೆಯುತ್ತಿದ್ದ ಪ್ರಾಮುಖ್ಯತೆ, ಈ ಪ್ರಾಮುಖ್ಯತೆಯನ್ನು ಒದಗುಮಾಡುವ ಮೇಲಿನ ಸಮುದಾಯ, ಅದಕ್ಕೆ ಸಾಕ್ಷಿಯಾಗಿ ನೀಡುತ್ತಿದ್ದ ಐತಿಹಾಸಿಕ, ಪೌರಾಣಿಕ ಹಿನ್ನೆಲೆಗಳು, ಇವೆಲ್ಲವೂ ಕೂಡಾ ಒಂದು ನಿರ್ದಿಷ್ಟ ಸಮುದಾಯದ ನೈಜ್ಯ ಚಹರೆಯನ್ನು ತಿಳಿಸುತ್ತವೆ. ಒಡೆಯನ ಸ್ಥಾನದಲ್ಲಿರುವ ಸಮುದಾಯ, ತನ್ನ

ಭೂಮಿಯಲ್ಲಿ ಆಳುಗಳಾಗಿ ದುಡಿಯುವ ಸಮುದಾಯಕ್ಕೆ ಈ ಬಗೆಯ ಪ್ರಾಮುಖ್ಯತೆಯನ್ನು ಕೊಡುವುದು ಬಹಳ ಕುತೂಹಲಕಾರಿಯಾದುದು. ತನ್ನದೇ ಭೂಮಿಯಲ್ಲಿ, ಭೂಮಿಯ ಒಡೆತನ ಮೂಲವನ್ನು ಸಾಂಕೇತಿಕವಾಗಿ ಈ ಬಗೆಯಲ್ಲಿ ಪುನರ್ ನಿರ್ಮಿಸುತ್ತಿರುವ ಬಗೆ ಇದು. ಅಲ್ಲದೇ ಕೃಷಿಯನ್ನೇ ಬದುಕಾಗಿಸಿಕೊಂಡ ಸಮುದಾಯವು ಕೃಷಿಯ ಎಲ್ಲಾ ಆಗುಹೋಗುಗಳನ್ನು ತಿಳಿದಿರುವ ಕಾರಣದಿಂದಲೂ ಇಂತಹ ಸಾಧ್ಯತೆಗಳು ಕಂಡುಬರುತ್ತವೆ. ಈ ನೆಲೆಯಲ್ಲಿ ಸ್ಪಷ್ಟವಾಗಿ ಮನ್ಸ/ಆದಿದ್ರಾವಿಡ ಸಮುದಾಯವು ತುಳುವ ಸಮುದಾಯಗಳೊಂದಿಗೆ ನೇರವಾದ ಸಂಬಂಧವನ್ನು ಸಾಧಿಸುತ್ತದೆ. ಆದರೆ ಈ ಬಗೆಯ ಕೃಷಿ ಮೂಲ ಸಂಬಂಧ ಸಾಧ್ಯವಾದಂತೆ ಸಾಮಾಜಿಕ ಸಂಬಂಧಗಳನ್ನು ಮನ್ಸ/ಆದಿದ್ರಾವಿಡರೊಂದಿಗೆ ಯಾವುದೇ ಸಮುದಾಯಗಳು ಸಾಧಿಸುವುದಿಲ್ಲ. ಸಾಮಾಜಿಕವಾಗಿ ಬಹುತೇಕ ಸಮಾಜದಿಂದ ಹೊರಗೇ ಉಳಿಯುವ ಮನ್ಸ/ಆದಿದ್ರಾವಿಡರು, ಮಣ್ಣು ಮತ್ತು ಅದಕ್ಕೆ ಸಂಬಂಧಿತ ಎಲ್ಲಾ ಕಾರ್ಯಗಳಲ್ಲೂ ಸಂಬಂಧವನ್ನು ಸಾಧಿಸುತ್ತಾರೆ. ಇದು ಕೇವಲ ತೋರಿಕೆಗಷ್ಟೇ ಅಲ್ಲದೆ, ಅನಿವಾರ್ಯ ಎಂಬಂತೆ ಈ ಬಗೆಯ ಒಳಸಂಬಂಧ ಮಣ್ಣಿನ ಮೂಲಕ ಏರ್ಪಡುತ್ತದೆ.

ಮನ್ಸ/ಆದಿದ್ರಾವಿಡರ ಅವಳಿವೀರರ ಕಥಾನಕದಲ್ಲೂ ಮುಗೇರ್ಲು ಮತ್ತು ಬೈದೆರ್ಲುಗಳ ಉಲ್ಲೇಖಗಳು, ಘಟನೆಗಳು ಸೂಚ್ಯವಾಗಿ ಬರುತ್ತವೆ. ಇಲ್ಲಿ ಸಮಾಜದ ಅತ್ಯಂತ ಕೆಳಗಿರುವ ಸಮುದಾಯವು ತನ್ನ ಪ್ರತಿಷ್ಟೆಯನ್ನು ಹೆಚ್ಚಿಸಿಕೊಳ್ಳುವ ಕಾರಣ ಒಂದೇ ಇರದೆ, ಸಹಜವಾಗಿ ಕೃಷಿ ಮೂಲಕ ಸಾಧಿತವಾಗುವ ಸಂಬಂಧದ ಮುಂದುವರಿಕೆಯಾಗಿಯೇ ಕಾಣಿಸುತ್ತದೆ. ಕಾಡಿನ ಬೇಟೆ ಸಂದರ್ಭದಲ್ಲಿ ಭೇಟಿಯಾಗುವ ಮುಗೇರ್ಲು, ಬೈದೆರ್ಲು, ಕಾನದ ಕಟದರ ಕಥಾನಕ, ಕೃಷಿ ಸಂಬಂಧಿತ ಬೇಟೆಯನ್ನೇ ಹಿನ್ನೆಲೆಯಾಗಿ ಇಟ್ಟುಕೊಳ್ಳುತ್ತದೆ. ಹೀಗಾಗಿ ಕೃಷಿಗೆ ಪೂರಕವಾದ ಬೇಟೆ, ಅಲ್ಲಿ ಆಗುವ ಭೇಟಿ, ತನಗಿಂತ ಮೇಲಿರುವ ಸಮುದಾಯದ ಅವಳಿ ವೀರರನ್ನು ಸೋಲಿಸುವ, ಬಳಿಕ ಒಪ್ಪಂದ ಮಾಡಿಕೊಳ್ಳುವ ಈ ಪ್ರಕ್ರಿಯೆಯ ಆಂತರ್ಯದಲ್ಲಿ ಸಮುದಾಯದ ಮೂಲ ಆಸಕ್ತಿ ಇರುವುದು ಸೋಲಿಸುವ ಕ್ರಿಯೆಯಲ್ಲಿ ಅಲ್ಲ. ಬದಲಾಗಿ ಹೊಂದಾಣಿಕೆಗಾಗಿ ಘರ್ಷಣೆ ಅನಿವಾರ್ಯ ಎನ್ನುವುದನ್ನೇ ಬಿಂಬಿಸುತ್ತದೆ. ಕೃಷಿಯಾಧಾರಿತ ಬೇಟೆಯಲ್ಲಿ ತಮ್ಮನ್ನು ಸರಿಸಮವಾಗಿ ಬಿಂಬಿಸಿಕೊಳ್ಳುವ ಇರಾದೆಯೂ ಗೋಚರಿಸುತ್ತದೆ. ಆ ಮೂಲಕ ಅತ್ಯಂತ ಕೆಳಗಿರುವ ಸಮುದಾಯದ ಹೊಂದಾಣಿಕೆಯ ಕ್ರಮ, ಅದನ್ನು ಅವಳಿ ವೀರರ ಮೂಲಕ ಸಾಧಿಸುವ ಕ್ರಿಯೆ ಇವುಗಳು ಕೃಷಿ ಮೂಲದಿಂದ ಬಂದ ಸಮುದಾಯದ ಆಂತರ್ಯದ ಆಸ್ಥೆಯೇ ಆಗಿದೆ. ಈ ಮೂಲಕ ಮನ್ಸ/ಆದಿದ್ರಾವಿಡ ಸಮುದಾಯವು ಸಾಮಾಜಿಕವಾಗಿ ಸಾಧಿಸಲಾಗದ್ದನ್ನು ಅವಳಿಗಳ ಕಥಾನಕದ ಮೂಲಕ ಸಾಧಿಸುತ್ತದೆ. ಹೀಗೆ ಸಮುದಾಯಗಳ ನಡುವಿನ ಒಳಸಂಬಂಧಗಳು ಕೆಳಗಿನಿಂದ ಮೇಲೆ ಸಾಗುವ, ಅಥವಾ ಮೇಲ್ಮುಖ ಚಲನೆಯನ್ನು ಗಳಿಸಲು ಅದು ಹೊಂದುವ ಕ್ರಮಗಳು, ಮುಂದಿಡುವ ಸೂಕ್ಷ್ಮ ವಿವರಗಳು, ಇವೇ ಮುಂತಾದ ವಿಚಾರಗಳನ್ನು ಕೆಳಸ್ತರದ ಸಮುದಾಯಗಳ ಮೂಲಕ ಕಂಡುಕೊಳ್ಳಬಹುದು. ಅದಕ್ಕೆ ಪೂರಕವಾಗಿ ಮನ್ಸ/ಆದಿದ್ರಾವಿಡ ಸಮುದಾಯವು ಇಂತಹ ಸಮುದಾಯಗಳೊಂದಿಗೆ ಹೊಂದುವ ಸಂಬಂಧವನ್ನು ಮುಖ್ಯವಾಗಿ ಗಮನಿಸಿಕೊಳ್ಳಬಹುದು.

ತುಳುನಾಡಿನ ಅವಳಿ ವೀರರಲ್ಲಿ ಜಾತಿಶ್ರೇಣೀಕರಣದಲ್ಲಿ ಅತ್ಯಂತ ತಳವರ್ಗದಲ್ಲಿ ಬರುವ ಕಾನದ ಕಟದರು ಕೃಷಿ ಮೂಲವನ್ನೇ ಪ್ರತಿನಿಧಿಸುತ್ತಾರೆ. ಅವಳಿವೀರರ ಇಡೀ ಬದುಕು ಕೃಷಿ ಮತ್ತು ಅದಕ್ಕೆ ಪೂರಕವಾದ ವಾತಾವರಣ, ಅನುಕೂಲತೆಗಳು, ಪ್ರಯೋಗಗಳ ಮೂಲಕವೇ ತೆರೆದುಕೊಳ್ಳುತ್ತದೆ. ಜಾತಿಬದ್ಧ ತುಳುವ ಸಾಮಾಜಿಕ ವ್ಯವಸ್ಥೆಯ ಪರಿಣಾಮ ಒಡೆಯನ ಮನೆಯ ಮೂಲದವರಾಗುವ ಕಾನದ ಕಟದರು ಬದುಕಿನುದ್ದಕ್ಕೂ ಕೃಷಿಯನ್ನೇ ನೆಚ್ಚಿಕೊಳ್ಳುತ್ತಾರೆ. ಕೇವಲ ಕೃಷಿ ಕಾರ್ಮಿಕರಾಗುವ ಕಾರಣಕ್ಕೆ ಒಂದು ನಿರ್ದಿಷ್ಟ ಸಮುದಾಯವು ಅವಳಿಗಳನ್ನು ವೀರರೆಂದು ಪರಿಭಾವಿಸಿ ಆರಾಧಿಸುವ, ಸಾಂಸ್ಕೃತಿಕ ನಾಯಕರನ್ನಾಗಿಸಿ ತನ್ನ ಅನನ್ಯತೆಯನ್ನು ಅವರ ಮೂಲಕ ಗುರುತಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ ಅವಳಿವೀರರ ಕಾಲಘಟ್ಟದಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕೃಷಿ ಮತ್ತು ಸಂಬಂಧಿಸಿದ ಇತರ ವಿಚಾರಗಳಲ್ಲಿ ಮಹತ್ತರವಾದುದನ್ನು ಸಾಧಿಸಿದುದರ ಪರಿಣಾಮವಾಗಿಯೇ ಕಾನದ ಕಟದರು ಮನ್ಸ/ಆದಿದ್ರಾವಿಡ ಸಮುದಾಯದ ಸಾಂಸ್ಕೃತಿಕ ನಾಯಕರಾಗುತ್ತಾರೆ. ಕೃಷಿ ಮೂಲದಿಂದ ಬಂದ ಕಾನದ ಕಟದರು, ಉಳ್ಳವರ ಮನೆಯ ಮೂಲದವರಾಗಿದ್ದು, ವೃತ್ತಿಯನ್ನು ಒಂದು ಸಾಹಸವೆಂಬಂತೆ ನಿರ್ವಹಿಸಿದ್ದು ಮಹತ್ವದ ಸಂಗತಿಯಾಗುತ್ತದೆ. ಪಾಡ್ದನವನ್ನು ಅನುಲಕ್ಷಿಸಿದರೆ, ತೀರಾ ಎಳವೆಯಲ್ಲಿಯೇ ಕೃಷಿ, ವ್ಯವಸಾಯದ ಕಾರಣಕ್ಕೆ ಗೇಲಿಗೆ ಒಳಗಾಗುವ, ಭತ್ತ ಬಿತ್ತಿ ಬೆಳೆ ಬೆಳೆಯುವ ಕೆಲಸಕ್ಕೆ ಒಂದು ಬಗೆಯಲ್ಲಿ ನಿರ್ಬಂಧವನ್ನು ಎದುರಿಸುವ ಉಲ್ಲೇಖಗಳು ಕಾನದ ಕಟದ ಪಾಡ್ದನದಲ್ಲಿ ದೊರಕುತ್ತದೆ. ತೆಂಗಿನ ಮರದ ಗರಿಯ ದಂಟಿನಿಂದ (ಕೊತ್ತಲಿಗೆ) ನೊಗ ನೇಗಿಲು ಮಾಡಿ ಅದರಲ್ಲಿ ಅಂಗಳವನ್ನೇ ಉತ್ತು, ಬಿತ್ತಲು ಭತ್ತ ಕೇಳಿದಾಗ, ಬೇಯಿಸಿದ ಭತ್ತವನ್ನು ನೀಡುತ್ತಾರೆ. ಅದನ್ನೇ ಬಿತ್ತಿ ಮರುದಿನ ನೋಡಿದಾಗ ಮೊಳಕೆ ಬಂದಿರುತ್ತದೆ. ಈ ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ನಿರ್ದಿಷ್ಟ ಸಮುದಾಯವು, ತನಗೆ ತೋಚಿದ, ತನ್ನ ಸ್ವಂತ ಭೂಮಿಯಲ್ಲಿ ಕೃಷಿ ಮಾಡದಂತೆ ಸಮಾಜವು ನಿರ್ಬಂಧಿಸುತ್ತದೆ. ಕೃಷಿ ಕಾರ್ಮಿಕರಾಗಿ ಮಾತ್ರ ಮನ್ಸ/ಆದಿದ್ರಾವಿಡರು ಕೆಲಸ ಮಾಡಬೇಕೆನ್ನುವ ಉಳ್ಳವರ ಪರವಾದ ವ್ಯವಸ್ಥೆ ಬೇಯಿಸಿದ ಭತ್ತವನ್ನು ಬಿತ್ತಲು ಕೊಡುತ್ತದೆ. ಇದೇ ಘಟನೆಯ ಮುಂದುವರಿದ ಭಾಗವಾಗಿ ಕಾನದ ಕಟದರು ಘಟ್ಟದ ಮೇಲಿನಿಂದ ಅತಿಕಾರೆ ಭತ್ತದ ಬೀಜವನ್ನು ತರುವ, ಸುಬ್ರಹ್ಮಣ್ಯದಿಂದ ಕಾರಿ ಕಬಿಲ ಕೋಣಗಳ ಜೋಡಿಯನ್ನು ತಂದು ಹಡಿಲು ಬಿಟ್ಟ ಒಡೆಯನ ಭತ್ತದ ಗದ್ದೆಯನ್ನು ಒಂದೇ ರಾತ್ರಿಯಲ್ಲಿ ಉಳುಮೆ ಮಾಡಿ ಬೆಳೆ ಬೆಳೆದ ಘಟನೆಯನ್ನು ನೋಡಬಹುದು. ಘಟ್ಟದ ಮೇಲಿನಿಂದ, ಬೇರೆಯದೇ ಪರಿಸರದ, ಬೇರೆಯದೇ ವಾತಾವರಣ, ಮಣ್ಣು, ನೀರು, ಗಾಳಿಯನ್ನು ಅವಲಂಬಿಸಿ ಬೆಳೆಯುವ ಅತಿಕಾರೆಯನ್ನು ತುಳುನಾಡಿನಲ್ಲಿ ತಂದು ಬೆಳೆಯುವುದು ಒಂದು ಬಗೆಯಲ್ಲಿ ಸಾಹಸವೇ ಸರಿ. ಸಹಜವಾಗಿ ಒಂದು ಊರಿನ ತಳಿಯನ್ನು ಇನ್ನೊಂದು ಊರಿನವರು ಬೆಳೆಯುವುದಕ್ಕೆ ಕೆಲವು ನಿರ್ಬಂಧಗಳೂ ಇವೆ. ಆದರೆ ಕಾನದ ಕಟದರು ಘಟ್ಟದ ಮೇಲೆ ಹೋಗಿ ಅತಿಕಾರೆ ಬೀಜವನ್ನು ತರಬೇಕಾದರೆ ಅದಕ್ಕೆ ನಿರ್ದಿಷ್ಟ ಕಾರಣಗಳಿರಬೇಕು. ಕೋಣಗಳ ಜೋಡಿ, ಭತ್ತದ ಬೀಜವನ್ನು ಬೇರೆ ಎಲ್ಲಿಂದಲೋ ತರುವುದಕ್ಕೆ ಹಿನ್ನೆಲೆಯಲ್ಲಿ, ಕಾನದ ಕಟದರಿಗೆ ತುಳುನಾಡಿನಲ್ಲಿ ಕೃಷಿಯನ್ನು ಸ್ವಂತಂತ್ರವಾಗಿ, ಸ್ವಂತ ಸಾಧನೆಯಿಂದ ಮಾಡಲು ನಿರ್ಬಂಧ ವಿಧಿಸಿರಬೇಕು. ಇದನ್ನು ಧಿಕ್ಕರಿಸಿದ ಕಾನದ ಕಟದರು ಬೇರೆಯದೇ ಭತ್ತದ ತಳಿಯನ್ನು, ಕೋಣಗಳನ್ನು ತರುತ್ತಾರೆ. ವೃತ್ತಿ ಸಂಘರ್ಷದ ಸೂಕ್ಷ್ಮ ಎಳೆಯನ್ನು ಇಲ್ಲಿ ಗುರುತಿಸಬಹುದು. ಮೂಲದವನು ಕೃಷಿಯ ಕಾರ್ಮಿಕನಾಗಿರಬೇಕೇ ಹೊರತು ಅವನು ಸ್ವತಂತ್ರವಾಗಿ ಕೃಷಿಕನಾಗುವಂತಿಲ್ಲ ಎನ್ನುವ ಅಘೋಷಿತ ನಿಯಮ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಇತ್ತು. ಇದನ್ನು ಧಿಕ್ಕರಿಸಿಯೇ ಸ್ವಂತ ಕೋಣಗಳನ್ನು, ತಮ್ಮದಲ್ಲದ ಊರಿನ ಭತ್ತದ ಬೆಳೆಯನ್ನು ತಂದು ತುಳುನಾಡಿನಲ್ಲಿ ಕಾನದ ಕಟದರು ಬೆಳೆಸಿದರು. ವೃತ್ತಿ ಮತ್ತು ಜಾತಿಗೆ ನೇರ ಸಂಬಂಧವನ್ನು ಕಲ್ಪಿಸುವ ಊಳಿಗಮಾನ್ಯ ವ್ಯವಸ್ಥೆ, ತಳಸಮುದಾಯಗಳನ್ನು ನಿರ್ಬಂಧಿಸುತ್ತದೆ. ಈ ನಿರ್ಬಂಧದಿಂದ ಹೊರಬಂದ ಕೃಷಿ ಅವಲಂಬಿತ, ಕೃಷಿಕರಾಗಿಯೇ ಬದುಕಿದ್ದ ಕಾನದ ಕಟದರು ಸಮಾಜದಲ್ಲಿ ಸತ್ಯದ ಬೆಳೆಯಾಗಿ ಅತಿಕಾರೆಯನ್ನು ತುಳುನಾಡಿನಾದ್ಯಂತ ಬೆಳೆಸುತ್ತಾರೆ. ವೃತ್ತಿ ಸಂಘರ್ಷದ ತೀವ್ರತೆ ಮತ್ತು ವರ್ಗ ಮೂಲದ ಸಂಘರ್ಷಗಳು ಎಲ್ಲಾ ಕಾಲಕ್ಕೂ ತಳ ಸಮುದಾಯಗಳನ್ನು ನಿರ್ಬಂಧಿಸುತ್ತಲೇ ಬಂದಿವೆ. ಇದನ್ನು ಮೀರಿದ ಅವಳಿ ವೀರರು ಸಮಾಜಕ್ಕೆ ಕೆಡುಕರಾಗಿ ಕಂಡರೂ ಸಮುದಾಯಗಳಿಗೆ ಅನನ್ಯತೆಯನ್ನು ತಂದುಕೊಡುವ ಸಾಂಸ್ಕೃತಿಕ ನಾಯಕರಾದರು. ಈ ಹಿನ್ನೆಲೆಯಲ್ಲಿ ಕಾನದ ಕಟದ ಅವಳಿ ವೀರರು ವೃತ್ತಿ ಮೂಲ ಸಂಘರ್ಷಕ್ಕೆ ತಮ್ಮ ಸಾಹಸ ಮತ್ತು ಧೈರ್ಯದಿಂದ ಪ್ರತ್ಯುತ್ತರವನ್ನು ನೀಡುವಲ್ಲಿ ಯಶಸ್ವಿಯಾದರು. ಹೀಗೆ ವೃತ್ತಿ ಸಂಘರ್ಷವು, ಊಳಿಗಮಾನ್ಯ ವ್ಯವಸ್ಥೆಯ ಕಾಲಘಟ್ಟದಲ್ಲಿ ತನ್ನದೇ ಆದ ರೀತಿಯಲ್ಲಿ ಹಲವಾರು ವಿಧಗಳಲ್ಲಿ ಗೋಚರಿಸುತ್ತಾ ಬಂದಿದೆ. ಸಮುದಾಯಗಳು ಒಂದು ನಿರ್ಬಂಧಿತ ವ್ಯವಸ್ಥೆಗೆ ಹೊಸತಾದ ಬೆಳವಣಿಗೆಯನ್ನು ಪೋಷಿಸುತ್ತಾ ಪ್ರತಿರೋಧವನ್ನು ಒಡ್ಡುತ್ತಲೇ ಬಂದಿವೆ.

ತುಳುನಾಡಿನ ಮೂಲ ನಿವಾಸಿಗಳು ಮತ್ತು ಭೂಮಿಯ ನೈಜ್ಯ ಒಡೆಯರಾಗಿದ್ದ ಸಮುದಾಯಗಳಲ್ಲಿ ಮನ್ಸರು/ಆದಿದ್ರಾವಿಡರು ಮುಖ್ಯರಾಗುತ್ತಾರೆ. ಕೃಷಿ,

ಪಶುಪಾಲನೆ, ಬೇಟೆ, ಇವೇ ಮುಂತಾದ ಚಟುವಟಿಕೆಗಳಲ್ಲಿ ವಿಶೇಷವಾದ ಪರಿಣತಿಯನ್ನು ಹೊಂದಿರುವ ಸಮುದಾಯ ಮನ್ಸ/ಆದಿದ್ರಾವಿಡರದ್ದು. ಸಮೂಹ ಸಂಸ್ಕೃತಿಯನ್ನು ನೆಚ್ಚಿಕೊಂಡಿರುವ ಈ ಸಮುದಾಯವು ಇವತ್ತಿಗೂ ಕೂಡಾ ಒಂದೇ ಪ್ರದೇಶದಲ್ಲಿ, ಕಾಲೋನಿಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದೆ. ಮನ್ಸ/ಆದಿದ್ರಾವಿಡರು ಈ ನೆಲದ ಮೂಲದವರು, ಒಡೆಯನ ಭೂಮಿಯಲ್ಲಿ ಕೃಷಿ ಕಾಯಕ ಮಾಡುತ್ತಿದ್ದವರು. ಒಡೆಯನ ಮನೆಯ ಮೂಲದವರಾಗಿದ್ದು, ಒಡೆಯನ ಮನೆಯ ಸದಸ್ಯರಾಗಿಯೇ ಇರುತ್ತಿದ್ದರು. ಮೂಲದ ಆಳು ಒಡೆಯನ ಸೂತಕದಿಂದ ಹಿಡಿದು ಎಲ್ಲಾ ಕಾರ್ಯಗಳಿಗೂ ಮುಖ್ಯನಾಗುತ್ತಿದ್ದನು. ಆದರೆ ಅಸ್ಪೃಶ್ಯರಾಗಿಯೇ ಉಳಿಯುತ್ತಿದ ಮನ್ಸರು/ಆದಿದ್ರಾವಿಡರು ಭೂಮಿಗೆ ಸಂಬಂಧಪಟ್ಟ ಎಲ್ಲಾ ಆಚರಣೆಗಳಲ್ಲಿ ಜೀವಿತದಲ್ಲಿ ನಡೆಯುವ ಮಹತ್ವದ ಘಟ್ಟಗಳಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತಿದ್ದರು.

ಮನ್ಸ/ಆದಿದ್ರಾವಿಡರ ಮುಖ್ಯ ವೃತ್ತಿ ಕೃಷಿ. ಕೃಷಿಗೆ ಸಂಬಂಧಪಟ್ಟ ಎಲ್ಲಾ ಆಚರಣೆಗಳಲ್ಲೂ ಮೂಲದವರಾಗಿ ಭಾಗವಹಿಸುತ್ತಿದ್ದರು. ಗದ್ದೆ ಗೋರುವುದು, ನೆಡುವುದು, ಬೀಜಬಿತ್ತುವುದು ಇವೇ ಮುಂತಾದ ಕೆಲಸಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು. ಕೃಷಿಗೆ ಸಂಬಂಧಪಟ್ಟಂತೆ ಕೃಷಿ ಭೂಮಿಯ ಪಾವಿತ್ರ್ಯಕ್ಕೆ ಸಂಬಂಧಪಟ್ಟ ಹಲವಾರು ಆಚರಣೆಗಳಲ್ಲಿ ಮನ್ಸ/ಆದಿದ್ರಾವಿಡರು ಮುಖ್ಯರಾಗುತ್ತಿದ್ದರು. ಸುಗ್ಗಿಯ ಬೆಳೆಗೆ 'ಬಾರೆ ಹಾಕುವುದು', ಪೂಕರೆ ಹಾಕುವುದು, ಪೊಲಿ ಕರೆಯುವುದು, ಕರ್ ಂಗೋಲು ಕಟ್ಟುವುದು, ಮುಂತಾದ ಕೃಷಿ ಸಂಬಂಧಿತ ಆಚರಣೆಗಳು ಮನ್ಸ/ಆದಿದ್ರಾವಿಡರ ಮೂಲಕವೇ ನೆರವೇರುತ್ತಿದ್ದವು. ಇವೆಲ್ಲವೂ ಒಡೆಯನ ಕೃಷಿ ಭೂಮಿಯಲ್ಲಿ ನಡೆದರೂ, ಮೂಲತಃ ಮನ್ಸ/ಆದಿದ್ರಾವಿಡರು ಸಾಂಕೇತಿಕವಾದ ಆಚರಣೆಗಳ ಮೂಲಕ ಸ್ವತಃ ಅವರೇ ಸಮೃದ್ಧಿಯನ್ನು, ಐಶ್ವರ್ಯವನ್ನು ತಂದುಕೊಡುವ ಮಧ್ಯವರ್ತಿಗಳಾಗುತ್ತಿದ್ದರು. ಕೃಷಿಯ ಎಲ್ಲಾ ಹಂತಗಳನ್ನು ಕರಗತ ಮಾಡಿಕೊಂಡಿದ್ದ ಸಮುದಾಯ ಸಹಜವಾಗಿ ಕಾಲಕ್ಕೆ ತಕ್ಕುದಾದ ನಿರ್ವಹಿಸಬೇಕಾದ ಕೆಲಸಗಳಲ್ಲಿ ಮುಂದಾಳುಗಳಾಗಿ ನಿಂತು, ಆ ಮೂಲಕ ಬೆಳೆ ಮತ್ತು ಸಮೃದ್ಧಿಯನ್ನು ಒಡೆಯನಿಗೆ ಒಪ್ಪಿಸುವ ಕೆಲಸವನ್ನು ನಿರ್ವಹಿಸುತ್ತಿದ್ದರು.

ಮೀನು ಬೇಟೆ ಬಲ್ಲ ಕಾನದ ಕಟದರನ್ನು ಅಸ್ಪೃಶ್ಯರೆನ್ನುವ ಕಾರಣಕ್ಕೆ, ಪವಿತ್ರವಾದ ಅಲೆರ ಕಟ್ಟಕ್ಕೆ ಕಡು ಹಾಕಿ ಮೀನು ಹಿಡಿದರೆನ್ನುವ ಕಾರಣಕ್ಕೆ ಮಾಯಕವೆಂಬ ಅಗೋಚರ ಹಿನ್ನೆಲೆಯಲ್ಲಿ ಅಂತ್ಯಮಾಡಲಾಯಿತು. ಈ ಎಲ್ಲಾ ಘಟನೆಗಳನ್ನು ಗಮನಿಸಿದರೆ ತುಳುವ ಅವಳಿವೀರರನ್ನು ಆರಾಧಿಸುವ ಸಮುದಾಯಗಳು ಅವರಿಗೆ ಸಾಮಾಜಿಕವಾಗಿ ವಿಧಿಸಿರಬಹುದಾದ ಅಥವಾ ಸಾಮಾಜಿಕ ನಿಷಿದ್ಧತೆಯ ಮೀರುವಿಕೆಗೆ ಅವಕಾಶಗಳಿರಲಿಲ್ಲ. ಸಮುದಾಯಗಳ ಒಳಸಂಬಂಧಗಳು ಅನುಪಾತದ ನೆಲೆಯಲ್ಲಿದ್ದು, ಒಂದನ್ನು ಮೀರಿ ಇನ್ನೊಂದನ್ನು ಸಾಧಿಸುವ ಕ್ರಿಯೆಯೇ ಅಪರಾಧವೆನ್ನುವ ಅಘೋಷಿತ ಸಾಮಾಜಿಕ ವ್ಯವಸ್ಥೆಯ ಮೂಲಕ ಎಲ್ಲವೂ ನಿರ್ದೇಶಿತವಾಗುತ್ತಿತ್ತು. ಸಮುದಾಯಗಳ ಒಳಸಂಬಂಧಗಳು ಆರ್ಥಿಕ ಗೇಯತೆಯ ಹಿನ್ನೆಲೆಯಲ್ಲಿ ಒಂದಕ್ಕೊಂದು ಪೂರಕವೆಂದೆನಿಸಿಕೊಂಡರೂ, ಅದರ ಹೊರತಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ಬಂಧಿತವಾಗುತ್ತಿತ್ತು.

"ಸಮುದಾಯಗಳು ಜಾತಿಗಳಾಗಿ ಪರಿವರ್ತನೆಗೊಳ್ಳುವುದಕ್ಕಿಂತ ಪೂರ್ವದಲ್ಲಿ ವೃತ್ತಿ ಸಮುದಾಯಗಳಾಗಿ ಗುರುತಿಸಿಕೊಂಡಿದ್ದವು" (ದೇವರಾಜ ಓ. (ಡಾ); ೨೦೧೩; ಪುಟ ೧೧೫). ಮನ್ಸ/ಆದಿದ್ರಾವಿಡ ಸಮಾಜದ ಮೂಲ ವೃತ್ತಿ ಕೃಷಿ. ಕೃಷಿಗೆ ಪೂರಕವಾದ ಹಲವಾರು ಚಟುವಟಿಕೆಗಳಲ್ಲೂ ಸಮುದಾಯ ಭಾಗವಹಿಸುತ್ತದೆ. ಕಾಡುಬೇಟೆ, ಮೀನು ಬೇಟೆ, ಪೂಕರೆ ಹಾಕುವುದು, ಬಾಳೆ ಹಾಕುವುದು, 'ಪೊಲಿ' ಕರೆಯುವುದು ಇವೇ ಮುಂತಾದ ಆಚರಣೆಗಳಲ್ಲೂ ಮನ್ಸ/ಆದಿದ್ರಾವಿಡ ಸಮುದಾಯವು ತನ್ನನ್ನು ತೊಡಗಿಸಿಕೊಂಡಿದೆ. ಇದೇ ವೃತ್ತಿ ಮುಂದೆ ಜಾತಿಯಾಗಿ ಪರಿವರ್ತನೆಯಾದಾಗ, ಈ 'ಮಣ್ಣಿನ ಮೂಲ'ದ ಸಮುದಾಯವು ಪ್ರಭುತ್ವ ಶಕ್ತಿಯ ಗುತ್ತಿನ ಮನೆಗಳ ಮೂಲದ ಕೃಷಿ ಕಾರ್ಮಿಕರಾಗಿ ಬದಲಾಯಿತು. ಸ್ವಂತ ಕೃಷಿ ಭೂಮಿಯನ್ನು ಕಳೆದುಕೊಂಡು, ಉಳ್ಳವರ ಮನೆಯ ಕೆಲಸದ ಮೂಲದವರಾಗಬೇಕಾಯಿತು. ಇಂತಹ ಸಂದಿಗ್ಧತೆಯಲ್ಲಿಯೂ ಸಮುದಾಯವು ತಮ್ಮ ಅವಳಿ ವೀರರ ಮೂಲಕ ಕೃಷಿ ಪ್ರಾಧ್ಯಾನ್ಯತೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ. ಸಾಮಾಜಿಕವಾಗಿ ಅಸ್ಪೃಶ್ಯ ಸಮುದಾಯವಾದ ಮನ್ಸ/ಆದಿದ್ರಾವಿಡರು ಕಾನದ ಕಟದರ ಕಥಾನಕದ ಮೂಲಕ ತಮ್ಮ ಮೂಲದ ಕಸುಬನ್ನು ಮತ್ತೆ ಹೊಂದುವ, ಅದಕ್ಕಾಗಿ ಪ್ರಯತ್ನಿಸುವ ಕಥಾನಕವನ್ನು ಕಟ್ಟಿಕೊಳ್ಳುತ್ತಾರೆ. ಕಾನದ ಕಟದರು ಘಟ್ಟದ ಮೇಲೆ ಹೋಗಿ ಅತಿಕಾರೆ ಭತ್ತದ ಬೀಜವನ್ನು ತರುವುದು, 'ಕಾರಿ ಕಬಿಲೆ' ಕೋಣಗಳ ಜೋಡಿಯನ್ನು ಖರೀದಿಸುವುದು, ಒಂದೇ ರಾತ್ರಿಯಲ್ಲಿ ಕೆರೆ ತೋಡಿ, ಗದ್ದೆ ಉತ್ತು, ಬೆಳೆ ಬೆಳೆಸುವ ಇಂತಹ ವಿವರಗಳು ಮತ್ತು ಕರ್ ಂಗೋಲು ಕುಣಿತದ ಪದ್ಯಗಳಲ್ಲಿ ಸಿಗುವ ಕೃಷಿಸಂಬಂಧೀ ವಿವರಗಳ ಮೂಲಕ ಕಳೆದುಕೊಂಡ ಕೃಷಿ ಬದುಕನ್ನು ಮತ್ತೆ ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ. ಸಾಮಾಜಿಕವಾಗಿ ತನಗೆ ಸಾಧಿಸಲಾಗದ್ದನ್ನು ಅವಳಿವೀರರ ಕಥನದ ಮೂಲಕ ಸಾಧ್ಯವಾಗಿಸುತ್ತದೆ. ಸಾಮಾಜಿಕವಾಗಿ ವೃತ್ತಿಯಿಂದ ಜಾತಿಯನ್ನು ಅಳೆಯುವ, ಜಾತಿಯನ್ನು ಸೂಚಿಸುವ ಹಂತಕ್ಕೆ ತಲುಪಿದಾಗ, ಸಹಜವಾಗಿ ಸಂಘರ್ಷ ಏರ್ಪಡುತ್ತದೆ. ಆದರೆ ಪ್ರಭುತ್ವದ ನೇರ ಸಂಬಂಧವನ್ನು ಬೆಳೆಸಿದ ಸಮುದಾಯಗಳ ದಬ್ಬಾಳಿಕೆಯಿಂದಾಗಿ ಕಳೆದುಹೋದ ಕೃಷಿ ಬದುಕನ್ನು ಅವಳಿ ವೀರರ ಕಥಾನಕಗಳ ಮೂಲಕ ಕಟ್ಟಿಕೊಳ್ಳುವ, ಆ ಮೂಲಕ ತನ್ನ ಇತಿಹಾಸವನ್ನು ಗಟ್ಟಿಗೊಳಿಸುವ, ಉಳ್ಳವರ ಮೋಸವನ್ನು ತನ್ನ ತಲೆಮಾರಿಗೆ ತಿಳಿಹೇಳುವ ಕಾರ್ಯವನ್ನು ನಿರ್ವಹಿಸುತ್ತದೆ.

ಕಾನದ ಕಟದ ಅವಳಿವೀರರು ಅಕಾಲ ಮರಣವನ್ನು ಹೊಂದುವುದು ಮೀನುಬೇಟೆಯ ಸಂದರ್ಭದಲ್ಲಿ. ಅಲೆರ ಗುಂಡಿಗೆ ಮೀನು ಹಿಡಿಯಲು ಹೋಗಿ 'ಕಡು' (ವಿಷ) ಹಾಕಿದಾಗ ಮೀನು ಸಿಗದೆ ಹಿಂತಿರುಗುತ್ತಾರೆ. ತನ್ನ ತಲೆಯ 'ಮುಟ್ಟಲೆ'ಯನ್ನು ಮರೆತು ಬಂದ ಕಟದ ಅಲೆರ ಗುಂಡಿಗೆ ಬಂದಾಗ ಮೀನು ನೋಡಿ ನೀರಿಗಿಳಿದಾಗ ಅಲೆರ ಪಂಜುರ್ಲಿ ಮಾಯ ಮಾಡುತ್ತಾನೆ. ತಮ್ಮನಾದ ಕಟದನು ಬರದೇ ಇದ್ದಾಗ ಕಾನದನೂ ಹೋಗಿ ಅಲೆರ ಗುಂಡಿಗೆ ಇಳಿಯುತ್ತಾನೆ. ಅವನನ್ನು ಅಲೆರ ಪಂಜುರ್ಲಿ ಮಾಯ ಮಾಡುತ್ತಾನೆ ಎನ್ನುವ ವಿವರಗಳು ಪಾಡ್ದನದಿಂದ ಲಭ್ಯವಾಗುತ್ತವೆ. ಈ ಘಟನೆಯನ್ನು ಸಾಮಾಜಿಕ ಸಂಘರ್ಷದ ಹಿನ್ನೆಲೆಯಲ್ಲಿ ಗಮನಿಸಿದಾಗ ಅಕಾಲ ಮರಣದ ನೈಜ್ಯತೆ ಸ್ಪಷ್ಟವಾಗುತ್ತದೆ. ಮನ್ಸ/ಆದಿದ್ರಾವಿಡ ಸಮುದಾಯವು ತುಳುವ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗೆ ಇರುವ ಸಮುದಾಯ. ಇತಿಹಾಸವನ್ನು ಅವಲೋಕಿಸಿದರೆ ಸಮುದಾಯವನ್ನು ಅಸ್ಪೃಶ್ಯತೆ ಇತ್ತೀಚಿನವರೆಗೂ ಕಾಡುತ್ತಿತ್ತು. ಅಸ್ಪೃಶ್ಯ ಸಮುದಾಯವೊಂದು ಯಾವುದೇ ಕಾರಣಕ್ಕೂ ತನ್ನ ಅವಶ್ಯಕತೆಗಳನ್ನು ಒಡೆಯನ ಅಪ್ಪಣೆ ವಿನಹ ನೀಗಿಸಿಕೊಳ್ಳುವಂತಿರಲಿಲ್ಲ. ಯಾರದೋ ಬಾವಿಯ ನೀರನ್ನು ಅವರ ಅನುಮತಿ ಇಲ್ಲದೆ ಸ್ಪರ್ಶಿಸುವಂತಿರಲಿಲ್ಲ. ಹೀಗಿರುವಾಗ ಅಲೆರ ಪಂಜುರ್ಲಿಯ ಹೆಸರಿನ ಮೂಲಕ ಸೂಚಿಸಲಾಗುತ್ತಿದ್ದ ಅಲೆರ ಗುಂಡಿಗೆ ವಿಷ ಹಾಕಿ ಮೀನು ಹಿಡಿಯುವ ಅಧಿಕಾರವನ್ನು ಸಮಾಜ ನೀಡುವುದಿಲ್ಲ. ಇದನ್ನು ಮೀರಿ, ಅಲೆರ ಗುಂಡಿಯನ್ನು ಸ್ಪರ್ಶಿಸಿ, ಗುಂಡಿಗೆ ವಿಷ ಹಾಕುವ ಈ ಘಟನೆಯನ್ನು ಖಂಡಿತವಾಗಿ ಅಂದಿನ ಸಮಾಜ ಒಪ್ಪುವುದಿಲ್ಲ. ಹೀಗಾಗಿ ಸ್ಪರ್ಶ ಮತ್ತು ಅಸ್ಪೃಶ್ಯತೆಯ ಈ ಸಾಮಾಜಿಕ ವ್ಯವಸ್ಥೆ ಅವಳಿವೀರರಾಗಿದ್ದ, ಕೃಷಿಯ ಬಗ್ಗೆ ತಮ್ಮದೇ ವಿದ್ವತ್ತನ್ನು ಪಡೆದಿದ್ದ, ಯಾವುದೋ ಘಟ್ಟದ ಭತ್ತದ ತಳಿಯನ್ನು, ಅದರ ವಾತಾವರಣವೇ ಅಲ್ಲದ ತುಳುನಾಡಿಗೆ ತಂದು, ಪುಣ್ಯದ ಬೆಳೆಯನ್ನು, ಸತ್ಯದ ಬೆಳೆಯನ್ನು ಬೆಳೆದ ಅಪ್ರತಿಮ ಸಾಹಸಿಗರನ್ನು, ಅಸ್ಪೃಶ್ಯತೆಯ ಕಾರಣಕ್ಕಾಗಿ, ಅಲೆರ ಗುಂಡಿಯಲ್ಲಿಯೇ ಸಾವಿಗೆ ನೂಕಲಾಯಿತು. ಅದನ್ನು ಅಲೆರ ಪಂಜುರ್ಲಿಯ ಹೆಸರಿನ ಮೂಲಕ ಅಲೌಕಿಕಕ್ಕೆ ಸೇರಿಸಲಾಯಿತು. ಸಾಮಾಜಿಕ ಸಂಘರ್ಷದ ಈ ಬಗೆಯ ಕೃತ್ಯಗಳಿಗೆ ಅಲೌಕಿಕತೆಯನ್ನು ಆರೋಪಿಸಿ ಮರೆಮಾಡಲಾಯಿತು. ಸಮಾಜದ ಅತ್ಯಂತ ತಳವರ್ಗದ ಅವಳಿವೀರರನ್ನು ಈ ಬಗೆಯಲ್ಲಿ ಸಾಮಾಜಿಕವಾಗಿ ಅಂತ್ಯಮಾಡಿದ್ದು, ಸಾಮಾಜಿಕ ಸಂಘರ್ಷದ ತೀವ್ರತೆಯನ್ನು ತೆರೆದಿಡುತ್ತದೆ.

ಅವಳಿ ವೀರರು ಪರಸ್ಪರ ಸಂಧಿಸುವ ವಿವರಗಳು ಕಾನದ ಕಟದ ಮತ್ತು ಮುಗೇರ್ಲು ಪಾಡ್ದನಗಳಲ್ಲಿ ದೊರೆಯುತ್ತವೆ. ಬೈದೆರ್ಲುವನ್ನು ಸಂಧಿಸುವ ವಿಚಾರ ಮುಗೇರ್ಲುಗಳಲ್ಲಿ, ಬೈದೆರ್ಲು ಮತ್ತು ಮುಗೇರ್ಲನ್ನು ಸಂಧಿಸಿದ

ವಿಚಾರ ಕ್ರಮವಾಗಿ ಕಾನದ ಕಟದರಲ್ಲಿ ಕಂಡುಬರುತ್ತದೆ. ಈ ಎರಡೂ ಅವಳಿವೀರರು ಸಂಧಿಸುವುದು ಬೇಟೆಯ ಸಂದರ್ಭದಲ್ಲಿ. ಮಾಂಸದ ಪಾಲು ಸಮನಾಗಿ ಇಲ್ಲ ಎಂದು ಮುಗೇರ್ಲು ಮತ್ತು ಕಾನದ ಕಟದರು ಬೈದೆರ್ಲನ್ನು ಧಿಕ್ಕರಿಸಿ ಹಿಂತಿರುಗುತ್ತಾರೆ. ಯೋಧರಾಗಿ ಗುರುತಿಸಿಕೊಂಡು, ಪ್ರಭುತ್ವದ ಆಡಳಿತದ ನೇರ ಸಂಪರ್ಕದಲ್ಲಿದ್ದ ಬೈದೆರ್ಲು ತಮಗಿಂತ ಜಾತಿ ಶ್ರೇಣೀಕರಣದಲ್ಲಿ ಕೆಳಗಿರುವ ಅವಳಿಗಳ ಮೇಲೆ, ಸಮುದಾಯಗಳ ಮೇಲೆ ಪ್ರಭಾವ ಬೀರುವ, ಅಧಿಕಾರ, ಬಲ ಪ್ರಯೋಗಿಸುವ ಸಾಧ್ಯತೆಗಳಿವೆ. ಆದರೆ ಈ ಅಧಿಕಾರವನ್ನು ಧಿಕ್ಕರಿಸುವ ಸಮುದಾಯಗಳು ತಾವೂ ಕೂಡಾ ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲ ಎನ್ನುವುದನ್ನು ಸೂಚ್ಯವಾಗಿ ಈ ಘಟನೆಗಳ ಮೂಲಕ ಸಾಧಿಸುತ್ತವೆ. ಅಧಿಕಾರದ ಸಂಘರ್ಷ ಹೀಗೆ ಅವಳಿಗಳ ನಡುವೆಯೂ ನಡೆಯುತ್ತದೆ. ಮುಗೇರ್ಲು ಮತ್ತು ಕಾನದ ಕಟದರು ಸಣ್ಣವರಿರುವಾಗ ಅರಸರ ಮಕ್ಕಳೊಂದಿಗೆ ಆಟವಾಡಿ ಅವರನ್ನು ಸೋಲಿಸುವುದು, ಇದರಿಂದಾಗಿ ಅರಸರು ಅಸೂಯೆ, ಅವಮಾನಕ್ಕೆ ತುತ್ತಾಗುವುದು, ಆ ಮೂಲಕ ಬದುಕಿನ ಆರಂಭದಿಂದಲೇ, ಅಧಿಕಾರವನ್ನು ಧಿಕ್ಕರಿಸುವ, ಸೆಡ್ಡು ಹೊಡೆಯುವ, ಜಾತಿಶ್ರೇಣೀಕರಣದಲ್ಲಿ ಕೆಳಗಿದ್ದರೂ, ತಮ್ಮ ಸ್ವಸಾಮರ್ಥ್ಯದಿಂದ ಸಂಘರ್ಷವನ್ನು ಎದುರಿಸುವ ಇಂತಹ ಪ್ರಕರಣಗಳು ಸ್ವಾಭಿಮಾನ, ಪ್ರತಿಷ್ಠೆಯ ಸಂಕೇತಗಳಾಗುತ್ತವೆ. ಅಧಿಕಾರದ ಸಂಘರ್ಷ ಕೇವಲ ಎರಡು ಪ್ರಭುತ್ವ ವ್ಯವಸ್ಥೆಗಳ ನಡುವೆ ಮಾತ್ರ ನಡೆಯದೆ, ಸಂಘರ್ಷವು ಅವಳಿಗಳೊಂದಿಗೆ, ಅವಳಿ ವೀರರ ನಡುವೆಯೂ ನಡೆಯುವುದನ್ನು ಈ ಮೂಲಕ ಗುರುತಿಸಬಹುದು.

ಕಂಬೆರ್ಲುಗಳಲ್ಲಿ ಎರಡಕ್ಕಿಂತ ಹೆಚ್ಚು ಪಾತ್ರಗಳು ಪಾಡ್ದನದ ಮುಖ್ಯಭೂಮಿಕೆಯಲ್ಲಿ ಮತ್ತು ಆರಾಧನಾ ಸಂದರ್ಭಗಳಲ್ಲಿ ಕಂಡುಬರುವುದಿಲ್ಲ. ಕಂಬೆರ್ಲು ಆರಾಧನಾ ರೂಪವು ಪ್ರಕೃತಿಯೊಂದಿಗೆ ಲೀನವಾಗಿರುವ ಸ್ಥಿತಿಯಲ್ಲಿಯೇ ಇಂದಿಗೂ ಮುಂದುವರೆದಿದೆ. ಹೀಗಾಗಿ ಪುರಾತನ ಅಥವಾ ಮೂಲರೂಪದ ಆರಾಧನಾ ಪರಂಪರೆಯನ್ನೇ ಇವತ್ತಿಗೂ ಕಂಬೆರ್ಲುಗಳಲ್ಲಿ ಗುರುತಿಸಬಹುದು. ಬಹುತೇಕ ಎಲ್ಲಾ ಪಾಡ್ದನ ಪಾಠಾಂತರಗಳಲ್ಲೂ ಒಂದೇ ಬಗೆಯ ಘಟನೆ, ಸ್ಥಳ, ಪಾತ್ರಗಳನ್ನು ಗುರುತಿಸುವುದು ಸಾಧ್ಯವಿದೆ.

ಅವಳಿವೀರರ ಆರಾಧನೆಯು ಸಮುದಾಯ ಕೇಂದ್ರಿತವಾಗಿದೆ. ಈ ಕಾರಣದಿಂದಾಗಿ ತುಳುವ ಸಮುದಾಯಗಳ ಸಾಂಸ್ಕೃತಿಕ ಜೀವಂತಿಕೆ, ಅವುಗಳು ಕಲಾ ಮತ್ತು ಆರಾಧನಾ ಮಾಧ್ಯಮಗಳ ಮೂಲಕ ತಿಳಿಸುವ ಆಶಯ ಇವುಗಳು ಬಹಳ ಮುಖ್ಯ ಆಗುತ್ತವೆ. ಸಮುದಾಯಗಳ ಒಳನೋಟವನ್ನು ಅವಳಿವೀರರ ಆರಾಧನೆಯ ಮೂಲಕ ಕಂಡುಕೊಳ್ಳುವುದರ ಜೊತೆಗೆ ಒಟ್ಟು ತುಳುವ ಸಮಾಜದ ಸಾಂಸ್ಕೃತಿಕ ಬಹುತ್ವಗಳನ್ನು ತಿಳಿದುಕೊಳ್ಳುವುದು ಸಾಧ್ಯವಿದೆ. ಸಮುದಾಯದ ಒಳಗಿನಿಂದಲೇ ನಿಷ್ಪನ್ನ ಹೊಂದಿದ ಅವಳಿವೀರರು ಆರಾಧನೆಯನ್ನು ಹೊಂದುವುದರ ಮೂಲಕ ತುಳುವ ಸಮಾಜವನ್ನು ಪ್ರಭಾವಿಸುತ್ತಾರೆ. ಆ ಮೂಲಕ ತುಳುವ ಜಾನಪದದ ಶ್ರೀಮಂತಿಕೆಯನ್ನು ಎತ್ತರಿಸುತ್ತಾರೆ.

**ಪರಾಮರ್ಶನ ಗ್ರಂಥಗಳು:**


1. ವಿವೇಕ ರೈ ಬಿ.ಎ. (ಡಾ); ಯದುಪತಿ ಗೌಡ, ರಾಜಶ್ರೀ (ಸಂ); ೨೦೦೪; ಪುಟ್ಟು ಬಳಕೆಯ ಪಾಡ್ದನಗಳು; ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ ಮಂಗಳೂರು ವಿಶ್ವವಿದ್ಯಾನಿಲಯ.
2. ದೇವರಾಜ ಓ. (ಡಾ);೨೦೧೩; ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು; ಪಲ್ಲವ ಪ್ರಕಾಶನ ಚೆನ್ನಪಟ್ಟಣ.
3. ಕರಿಯ ಎಚ್. ೧೯೯೪; ಮನ್ಸ ಜನಾಂಗದ ಸಾಂಸ್ಕೃತಿಕ ಅಧ್ಯಯನ (ಎಂ.ಎ.ಸ್ನಾತಕೋತ್ತರ ಪದವಿಗೆ ಸಾದರಪಡಿಸಿದ ಸಂಪ್ರಬಂಧ; ಮಾರ್ಗದರ್ಶನ ಅರವಿಂದ ಮಾಲಗತ್ತಿ); ಕನ್ನಡ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ.
4. ಅಭಯ್ ಕುಮಾರ್ ಕೆ. (ಡಾ); ೧೯೯೭; ಮುಗೇರರು ಜನಾಂಗ ಜಾನಪದ ಅಧ್ಯಯನ; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ನೃಪತುಂಗ ರಸ್ತೆ ಬೆಂಗಳೂರು–೨ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಲಾಲ್‌ಬಾಗ್ ಮಂಗಳೂರು–೩.
5. ಚಿನ್ನಪ್ಪ ಗೌಡ ಕೆ. (ಡಾ); ೧೯೯೦; ಭೂತಾರಾಧನೆ ಜಾನಪದೀಯ ಅಧ್ಯಯನ; ಮದಿಪು ಪ್ರಕಾಶನ ಮಂಗಳಗಂಗೋತ್ರಿ.